ಎಸ್.ಸಿ.ಸಂಖ್ಯೆಃ 10047/2025
ಪ್ರಾ.ಸಾ.ಸಂಖ್ಯೆಃ 04
ಚಾಸಾ ಸಂಖ್ಯೆಃ 15

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಕೋಟೆ ಉಪಸ್ಥಿತಿಃ ಮುಧೋಳ.**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ಡಾಃಃ ಶ್ರೇಣಿ ನಾವಲಗಿ |
| ಗಂಡನ ಹೆಸರುಃ | ಸುನೀಲ |
| ವಯಸ್ಸುಃ | 49 ವರ್ಷ |
| ಉದ್ಯೋಗಃ | ವೈದ್ಯಾಧಿಕಾರಿ, ಸರ್ಕಾರಿ ಆಸ್ಪತ್ರೆ, ಮುಧೋಳ |
| ವಾಸಃ | ಮುಧೋಳ |

**ಸಾಕ್ಷಿಯನ್ನು ದಿಃ 11.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

ನಾನು ಕಳೆದ 08 ವರ್ಷಗಳಿಂದ ಮುಧೋಳ ತಾಲೂಕಾ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನೆ.

1. ದಿನಾಂಕಃ 27.02.2021 ರಂದು ಗಾಯಾಳು ಶ್ರೀದೇವಿ ಮೇತ್ರಿ ಎನ್ನುವ 45 ವರ್ಷ ವಯಸ್ಸಿನ ಹೆಣ್ಣು ಮಗಳು ಹಲ್ಲೆಯ ಪೂರ್ವ ಇತಿಹಾಸದೊಂದಿಗೆ ಮದ್ಯಾಹ್ನ 03.20 ಗಂಟೆಗೆ ಚಿಕಿತ್ಸೆಗೆ ಹಾಜರಾಗಿದ್ದು, ನಾನು ಅವರನ್ನು ಪರೀಕ್ಷೆ

ಮಾಡಲಾಗಿ 1. ಅವರ ಬಲಭುಜ, ಎಡಗಾಲು ಹಾಗೂ ಎಡಮೊಣಕಾಲು ಮೂಕೇಟುಗಳು ಆಗಿದ್ದವು. 2. ಹೊಟ್ಟೆಗೆ ಮೂಕೇಟು ಆಗಿತ್ತು.

2. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿದ್ದು, ನಾನು ಈ ಬಗ್ಗೆ ಈಗ ನೋಡುತ್ತಿರುವ ಪ್ರಮಾಣ ಪತ್ರ ನೀಡಿದ್ದೇನೆ. (ಸದರಿ ಪ್ರಮಾಣ ಪತ್ರವನ್ನು ನಿಪಿ-9 ಅಂತಾ ಗುರುತಿಸಲಾಯಿತು.)

3. ನಂತರ ಇನ್ನೊಬ್ಬ ಗಾಯಾಳು ಶೇಖರ ಶ್ರೀದೇವಿ ಮೇತ್ರಿ ಎನ್ನುವ 31 ವರ್ಷದ ವ್ಯಕ್ತಿ ಅದೇ ದಿವಸ ಚಿಕಿತ್ಸೆಗೆ ಹಾಜರಾಗಿದ್ದು ಅವನನ್ನು ಪರೀಕ್ಷೆಗೆ ಒಳಪಡಿಸಲಾಗಿ ಅವರ ಹೊಟ್ಟೆಗೆ ಮೂಗೇಟು ಆಗಿದ್ದು, ನನ್ನ ಅಭಿಪ್ರಾಯದಲ್ಲಿ ಸದರಿ ಗಾಯ ಸಾದಾ ಸ್ವರೂಪದ ಗಾಯ ಆಗಿರುತ್ತದೆ. ನಾನು ಈ ಬಗ್ಗೆ ಈಗ ನೋಡುತ್ತಿರುವ ಪ್ರಮಾಣ ಪತ್ರ ನೀಡಿದ್ದೇನೆ. (ಸದರಿ ಪ್ರಮಾಣ ಪತ್ರವನ್ನು ನಿಪಿ-10 ಅಂತಾ ಗುರುತಿಸಲಾಯಿತು.)

4. ನಿಪಿ-9 ಹಾಗೂ 10 ರಲ್ಲಿಯ ಗಾಯಗಳು ಒಬ್ಬ ವ್ಯಕ್ತಿಗೆ ಕೈಯಿಂದ ಹೊಡೆದಲ್ಲಿ, ಕಾಲಿನಿಂದ ಒದ್ದಲ್ಲಿ ಹಾಗೂ ಈಗ ನಾನು ನೋಡುತ್ತಿರುವ ಬಡಿಗೆಯಿಂದ ಹೊಡೆದಲ್ಲಿ ಆಗುವ ಸಾಧ್ಯತೆ ಇದೆ. (ಸದರಿ ಬಡಿಗೆಯನ್ನು ಮು.ಮಾ. 1 ಅಂತಾ ಗುರುತಿಸಲಾಯಿತು.)

**<u>ಪಾಟೀ ಸವಾಲುಃ 1 ನೇ ಆರೋಪಿ ಪರವಾಗಿ ಶ್ರೀ.ಎಸ್.ಐ.ಎಚ್. ವಕೀಲರಿಂದಃ</u>**

1. ನಿಪಿ-9 ಹಾಗೂ 10 ರಲ್ಲಿ ಗಾಯಗಳ ವಯಸ್ಸನ್ನು ಬರೆದಿಲ್ಲ ಎಂದರೆ ಸರಿ. ನಡೆಯುವಾಗ ಎಡವಿ ಬಿದ್ದರೂ ಸಹ ನಿಪಿ-9 ಹಾಗೂ 10 ರಲ್ಲಿ ಹೇಳಿದ ಗಾಯಗಳು ಆಗಬಹುದು ಎಂದರೆ ಸಾಕ್ಷಿದಾರರು "ಆಗಬಹುದು ಆದರೆ ಬೇರೆ ಬೇರೆ ಭಾಗಗಳಿಗೆ ಒಂದೇ ಬಾರಿ ಆಗುವುದಿಲ್ಲ" ಅಂತಾ ಹೇಳುತ್ತಾರೆ. ನಿಪಿ-9 ಹಾಗೂ 10 ರಲ್ಲಿ ಕಾಣಿಸಿದ ಗಾಯಗಳು ಮೋಟಾರು ಸೈಕಲ ಮೇಲಿಂದ ಬಿದ್ದಾಗ ಆದ ಗಾಯಗಳು ಇರುವುದಿಲ್ಲ. ನಿಪಿ-9 ಹಾಗೂ 10 ಇವುಗಳನ್ನು ನಾನು ಕೇವಲ ಗಾಯಾಳುಗಳನ್ನು ಕೇಳಿ ಬರೆದಿಲ್ಲ, ಅವರನ್ನು ಪರೀಕ್ಷೆ ಮಾಡಿ ಬರೆದಿದ್ದೇನೆ.

2. ನಿಪಿ-9 ಹಾಗೂ 10 ಇವುಗಳಲ್ಲಿ ಗಾಯಾಳುಗಳನ್ನು ಯಾರು ಕರೆದುಕೊಂಡು ಬಂದಿದ್ದರು ಅಂತಾ ಬರೆದಿಲ್ಲ ಎಂದರೆ ಸರಿ. ಮು.ಮಾ. 1 ರಿಂದ ಹೊಡೆದಲ್ಲಿ ನಿಪಿ-9 ಹಾಗೂ 10 ರಲ್ಲಿ ಆದ ಗಾಯಗಳು ಸಂಭವವಿಲ್ಲ ಎನ್ನು ವ ಸೂಚನೆಗೆ ಸಾಕ್ಷಿದಾರರು "ಅದು ಬಲಪ್ರಯೋಗದ ಹೊಡೆತದ ಮೇಲೆ ನಿರ್ಧಾರವಾಗುತ್ತದೆ" ಅಂತಾ ಹೇಳುತ್ತಾರೆ. ಮು.ಮಾ. 1 ರಿಂದ ಹೊಡೆದಲ್ಲಿ ನಿಪಿ-9 ಹಾಗೂ 10 ರಲ್ಲಿ ಆದ ಗಾಯಗಳು ಆಗುವುದಿಲ್ಲ ಎಂದರೆ ಸರಿಯಲ್ಲ.

3. ಮು.ಮಾ. 1 ನ್ನು ಪರೀಕ್ಷೆ ಮಾಡಿ ಆಯುಧಾಭಿಪ್ರಾಯ ನೀಡುವಂತೆ ತನಿಖಾಧಿಕಾರಿ ನನಗೆ ಕೇಳಿಲ್ಲ. ನಾನು ಮುಖ್ಯ ಸಾಕ್ಷಿಯಲ್ಲಿ ಹೇಳಿದಂತೆ ಶ್ರೀದೇವಿ ಹಾಗೂ ಶೇಖರ ಎನ್ನುವವರು ಚಿಕಿತ್ಸೆಗೆ ಹಾಜರಾಗಿಲ್ಲ, ನಾನು ಅವರಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಕೇವಲ ತನಿಖಾಧಿಕಾರಿಯ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರಗಳನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ.ಎ.ಎಮ್.ಎಮ್. ವಕೀಲರಿಂದಃ**

ಅದೇ ಪಾಟೀ ಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**